**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಅಂಕೋಲಾ**

ಸಿ.ಸಿ.ನಂ.299/2022

**ಫಿರ್ಯಾದುದಾರರು:** ಅಂಬಿಕಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಅಂಕೋಲಾ

ವಿರುದ್ಧ

**ಆರೋಪಿ** : ಸುರೇಶ ಹೊಸಬು ನಾಯಕ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ:**

ಪ್ರ.1 . ನೀವು ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ?
ಉತ್ತರ:

ಪ್ರ.2 . ಫ಼್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದಿ ಸಂಸ್ಥೆಯಿಂದ ಆರೋಪಿಯಾದ ನೀವು ವಾಹನವನ್ನು ಖರೀದಿಯ ಸಲುವಾಗಿ ವಾಹನ ಖಾತೆ ಸಂಖ್ಯೆ 1048 ರಲ್ಲಿ ದಿ: 10-01-2017 ರಂದು, ರೂಪಾಯಿ 3,00,000/- ಸಾಲವನ್ನು ಜಾಮೀನುದಾರರಾದ ಶ್ರೀ ಅಮರ್ ಸುರೇಶ ನಾಯಕ ಹಾಗೂ ಶ್ರೀಮತಿ ವಿದ್ಯಾ ಸುರೇಶ ನಾಯಕರವರ ಜಾಮೀನಿನಲ್ಲಿ ಸಾಲ ಕರಾರು ಪತ್ರ ಹಾಗೂ ಇತರೆ ಕಾಗದ ಪತ್ರಗಳನ್ನು ಬರೆದುಕೊಟ್ಟು ನಿಗದಿತ ಅವಧಿಯೊಳಗೆ ಶೇ 16 ರ ಬಡ್ಡಿ ದರದಲ್ಲಿ ಸಾಲವನ್ನು ತುಂಬುವುದಾಗಿ ಒಪ್ಪಿಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರ.3. ಫ಼್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ನೀವು ಸಾಲ ಮತ್ತು ಬಡ್ಡಿ ಹಣವನ್ನು ತುಂಬದೆ ಕಟ್ಟಾ ಬಾಕಿದಾರರಾಗಿ ದಿ: 18-11-2019 ರಂದು ಸದ್ರಿ ಕಟ್ಟಾ ಬಾಕಿ ಪಾವತಿಸಲು ಹೇಳಿದಾಗ , ನಿಮ್ಮ ಸಿಂಡಿಕೇಟ್ ಬ್ಯಾಂಕ್ ಖಾತೆ ಸಂಖ್ಯೆ 03122200078859 , ಅವರ್ಸಾ ಶಾಖೆಯ ದಿ: 18-11-2019 ನಿಪಿ-1 ಚೆಕ್ ಸಂಖ್ಯೆ 789563 ಅನ್ನು ರೂ. 2,10,000/- ಗೆ ನಿಮ್ಮ ಬ್ಯಾಂಕ್ ಖಾತೆಯಲ್ಲಿ ಆ ಚೆಕ್ ನಗದಿಕರಣಗೊಳಿಸಲು ಸಾಕಷ್ಟು ಹಣವಿದೆ ಎಂದು ಹೇಳಿ ನೀಡಿರುತ್ತೀರಿ
ಎಂದು ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ:

ಪ್ರ.4 . ಫ್ರಾ.ಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ನಿಪಿ–1 ಚೆಕ್ ನ್ನು ನಗದೀಕರಣಕ್ಕಾಗಿ ವಿಜಯ ಬ್ಯಾಂಕ್ ಅಂಕೋಲಾ ಶಾಖೆಗೆ ಸದರಿ ಚೆಕ್ ನ್ನು ಹಾಜರು ಪಡಿಸಿದಾಗ ನಿಮ್ಮ ಖಾತೆ ಕಾರ್ಯ ರೂಪದಲ್ಲಿ ಇರುವುದಿಲ್ಲ ( account Dormat) ಎಂದು ದಿಃ 21–11–2019 ನಿಪಿ–2 ರ ಬ್ಯಾಂಕ್ ನ ಹಿಂಬರಹದೊಂದಿಗೆ ಸದರಿ ನಿಪಿ–1 ಚೆಕ್ ವಾಪಸ್ಸು ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.5 ಫ್ರಾಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಿಮಗೆ ಸಾಲವನ್ನು ಮರುಪಾವತಿ ಮಡುವಂತೆ ವಕೀಲರ ಮೂಲಕ ದಿಃ 17–12–2019 ರಂದು ನಿಪಿ–3 ರಂತೆ ನೋಟಿಸನ್ನು ನೀಡಿದ್ದು, ಸದರಿ ನೋಟಿಸ್ ನಿಮಗೆ ದಿಃ 24–12–2019 ರಂದು ಜಾರಿಯಾಗಿದ್ದರೂ ಕೂಡ ನೀವು ಆ ನೋಟಿಸಿಗೆ ಉತ್ತರವನ್ನು ನೀಡಿಲ್ಲ ಹಾಗೂ ಚೆಕ್ ನ ಹಣವನ್ನು ಕೂಡ ಪಾವತಿಸಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ.6 ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?

ಉತ್ತರಃ

ಪ್ರ.7 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೇಯೇ ?

ಉತ್ತರಃ

( ಆರೋಪಿತರಿಗೆ ಮೇಲಿನ ಪ್ರಶ್ನೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ, ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ 22–03–2025 (ಮನೋಹರ ಎಂ.)

ಅಂಕೋಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಅಂಕೋಲಾ.